(*d*) It is proposed to complete the same by the end of April 1982.

ಶ್ರೀ ಎಂ. ಎಸ್. ಆತ್ಮಾನಂದ.—ಸ್ವಾಮಿ, ಸುಭಾಷ್ ನಗರದ ಮೈದಾನದ ಬಳಿಯ ಒಳಚರಂಡಿಯ ನಿರ್ಮಾಣ ಯಾವಾಗ ಪ್ರಾರಂಭವಾಯಿತು ? ಅದು ಪ್ರಾರಂಭವಾದಾಗ ಅಂದಾಜು ಎಷ್ಟು ಇತ್ತು ? ಈಗ ಪರಿಷ್ಕೃತ ಅಂದಾಜು ಎಷ್ಟು ? ಸಾರ್ವಜನಿಕರಿಗೆ ಮತ್ತು ಸಾರಿಗೆ ಸಂಚಾರಕ್ಕೆ ಬಹಳಷ್ಟು ಅನಾನುಕೂಲವಾಗಿದೆ ಎನ್ನುವುದು ಗೊತ್ತಿದ್ದರೂ ಕೂಡ ಈ ಕೆಲಸ ಪೂರ್ಣ ಮಾಡಲಿಕ್ಕೆ ಏತಕ್ಕೆ ಇಷ್ಟು ತಡವಾಗಿದೆ.

ಶ್ರೀ ಧರ್ಮಸಿಂಗ್.—ಅಧ್ಯಕ್ಷರೆ, ಸುಭಾಷ್‌ನಗರ ಮೈದಾನದ ಬಳಿಯ ಒಳಚರಂಡಿಯ ಕೆಲಸದ ಅಂದಾಜು ಪ್ರಾರಂಭದಲ್ಲಿ ೧೪.೫೫ ಲಕ್ಷ ರೂಪಾಯಿ ಇತ್ತು. ಈಗ ಅದು ರಿವೈಸ್ಡ್ ಎಸ್ಟಿಮೇಟ್ ಆಗಿ ೯೦ ಲಕ್ಷ ರೂಪಾಯಿ ಆಗಿದೆ. ೧೯೭೫ರಲ್ಲಿ ಕೆಲಸ ಪ್ರಾರಂಭವಾಗಿದ್ದು ಒಟ್ಟು ೧,೧೦೦ ಮೀಟರ್ ಇದೆ. ಇದಕ್ಕೆ ಮೊದಲು ಈ ಪ್ರಶ್ನೆ ವಿಧಾನಪರಿಷತ್ತಿನಲ್ಲಿ ಬಂದಿತ್ತು. ಮೇ ತಿಂಗಳಿನಲ್ಲಿ ಕಂಪ್ಲೀಟ್ ಮಾಡುತ್ತೇವೆಂದು ತಿಳಿಸಿದ್ದೇವು. ಆಲ್ಲಿ ೧೦ ಮೀಟರ್ಸ್ ಮಾತ್ರ ಉಳಿದಿದೆ. ಮತ್ತೊಂದು ಗ್ರೇಡ್ ಸೆಪರೇಷನ್ ವರ್ಕ್ ತೆಗೆದುಕೊಂಡಿದ್ದಾರೆ. ಅದಕ್ಕೆ ಸ್ವಲ್ಪ ಕೆಲಸ ಮಾಡಲಿಕ್ಕೆ ಬೇಕಾಗುತ್ತದೆಂದು ಜೊತೆಯಲ್ಲಿ ಇಟ್ಟಿದ್ದೇವೆ. We have already completed that work.

SRI W. M. SINCLAR MARLEY.—Mr. Speaker Sir, in view of the answer given, I am quite pleased with it. Thank you.

Lease of Kunigal Stud Farm

542 SRI ANDANAIAH (Kunigal).—Will the Minister for Finance and Tourism be pleased to state :—

(*a*) the number of years upto which the Stud Farm in Kunigal has been leased out to Bangalore Turf Club ;

(*b*) the lease amount fixed for per year ;

(*c*) the total extent of land of Stud Farm ;

(*d*) whether the Government has taken any action to increase the lease amount ?

SRI M. VEERAPPA MOILY (Minister for Finance and Tourism).—

(*a*) 28 years (from 1-4-1971).

(*b*) Rs. 65,000/-per year (from 1-4-1971).
Rs. 1,00,000/-per year (from 1-4-1976).

(*c*) About 484 acres.

(*d*) The lease amount may be increased once in five years as per lease agreement and the same is under the consideration of Government.

ಶ್ರೀ ಆಂದಾನಯ್ಯ.—ಸ್ವಾಮಿ, ಕುಣಿಗಲ್ ಸ್ಟಡ್ ಫಾರಂನ್ನು ಬೆಂಗಳೂರು ಟರ್ಫ್ ಕ್ಲಬ್‌ನವರಿಗೆ ೬೫ ಸಾವಿರ ರೂಪಾಯಿಗಳಿಗೆ ಗುತ್ತಿಗೆ ಕೊಟ್ಟರುವುದಾಗಿ ಹೇಳಿದ್ದೀರಿ, ಮತ್ತು ಈಗ ಆ ಹಣವನ್ನು ೧ ಲಕ್ಷ ರೂಪಾಯಿಗೆ ಏರಿಸಿರುವುದಾಗಿ ತಿಳಿಸಿದ್ದೀರಿ. ಈ ಹಣವನ್ನು ಏನು ನಿಗದಿ ಮಾಡಿದ್ದೀರಿ ಇದು ಬಹಳ ಕಡಿಮೆ. ಆದ್ದರಿಂದ ಒಂದು ವರ್ಷಕ್ಕೆ ಕನಿಷ್ಟ ೫ ಲಕ್ಷ ರೂಪಾಯಿಗಳನ್ನಾದರೂ ನಿಗದಿ ಪಾಡ ಬೇಕೆಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—೧-೪-೧೯೭೬ ಹಿಂದ ೧ ಲಕ್ಷ ರೂಪಾಯಿ ಗುತ್ತಿಗೆ ಎಂದು ನಿಗದಿ ಮಾಡಿದ್ದೇವೆ. ಈಗ ೫ ವರ್ಷ ಆದಮೇಲೆ ಇದನ್ನು ಹೆಚ್ಚು ಮಾಡುವುದಕ್ಕೆ ಅವಕಾಶವಿದೆ. ಈಗ ನಾವು ಮಾಡಿಕೊಂಡಿದ್ದ ಕರಾರಿನ ಅವಧಿ ಮುಗಿದಿದೆ. The term has expired with regard to the fixing up of the lease amount. ತಾವು ಏನು ಸಲಹೆ ಕೊಟ್ಟಿದ್ದೀರಿ ಇದನ್ನು ಸರ್ಕಾರ ಪರಿಶೀಲಿಸುತ್ತದೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಗುತ್ತಿಗೆ ಕರಾರು ಏನಿದೆ ಇದನ್ನು ಸರ್ಕಾರದವರು ಏಕಮುಖವಾಗಿ ರದ್ದು ಮಾಡುವುದಕ್ಕೆ ಅವಕಾಶ ಏನಾದರೂ ಇದೆಯೆ ? ಹಾಗೆ ಅವಕಾಶವಿದ್ದರೆ ಅಲ್ಲಿ ಯಾವುದಾದರೂ ಹೊಸ ತಳಿಯ ರಾಸುಗಳನ್ನು ಅಂದರೆ ಎಮ್ಮೆ, ಅಥವಾ ಹಸುಗಳನ್ನು ಸಾಕುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಏಕೆಂದರೆ ಹೊಸ ತಳಿಗಳನ್ನು ಸಾಕುವುದಕ್ಕೆ ಉತ್ತಮ ಸ್ಥಳ ಅದು. ಆದ್ದರಿಂದ ಕುದುರೆಗಳನ್ನು ಸಾಕುವುದಕ್ಕೆ ಬದಲಾಗಿ ಅಲ್ಲಿ ಎಮ್ಮೆ, ಹಸುಗಳ ತಳಿಗಳನ್ನು ಸಾಕುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವೀರಪ್ಪಮೊಯ್ಲಿ.—ಕುದುರೆಗಳ ಹೊಸ ತಳಿಗಳನ್ನು ಸಾಕುವುದಕ್ಕೆ ಮಾತ್ರ ಸಾಧ್ಯ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಸ್ವಾಮಿ, ಅಲ್ಲಿರತಕ್ಕದ್ದು ೪೮೮ ಎಕರೆ ಪ್ರದೇಶ. ಅದರ ಪೈಕಿ ಆ ಸ್ಪಡ್ ಫಾರಂನವರು ಕುದುರೆಗಳನ್ನು ಸಾಕುತ್ತಿರುವುದು ಸುಮಾರು ೫೦ ಎಕರೆ ಪ್ರದೇಶ ಇರಬಹುದು. ಇನ್ನುಳಿದ ಜಾಗವನ್ನು ಅವರು ಹುಲ್ಲು ಬೆಳೆಸುವುದಕ್ಕಾಗಿ ಇಟ್ಟುಕೊಂಡಿದ್ದಾರೆ. ಅಷ್ಟೊಂದು ಜಾಗ ಅವರಿಗೆ ಬೇಕಾಗಿಲ್ಲ. ಆದ್ದರಿಂದ ಸರ್ಕಾರವವರು ಏನು ಕರಾರು ಮಾಡಿಕೊಂಡಿದ್ದಾರೆ ಇದನ್ನು ಪೂರ್ಣವಾಗಿ ಪರಿಶೀಲನೆ ಮಾಡಿ ಸಾಧ್ಯವಿದ್ದರೆ ನೀವು ಮಾಡಿಕೊಂಡಿರತಕ್ಕ ಕರಾರನ್ನು ರದ್ದುಮಾಡಿ ನನ್ನ ಸಲಹೆಯ ಪ್ರಕಾರ ಅಲ್ಲಿ ಬ್ರೀಡಿಂಗ್ ಸೆಂಟರ್‌ನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಆ ಸ್ಥಳವನ್ನು ಅವರು ಕುದುರೆ ಬ್ರೀಡಿಂಗ್ ಸೆಂಟರ್‌ಗಾಗಿ ತೆಗೆದುಕೊಂಡಿದ್ದಾರೆ. ಅವರಿಗೆ ಬೇರೆ ಸ್ಥಳವನ್ನು ಕೊಟ್ಟ ಮೇಲೆ ಆ ಸ್ಥಳವನ್ನು ನಾವು ತೆಗೆದುಕೊಳ್ಳುವುದಕ್ಕೆ ಬರುತ್ತದೆ. ೨೮ ವರ್ಷಗಳಿಗೆ ಆಗಿರತಕ್ಕ ಕರಾರನ್ನು ನಾವು ಏಕಮುಖವಾಗಿ ರದ್ದು ಮಾಡುವುದಾದರೆ ಬ್ರೀಚ್ ಆಫ್ ಕಾಂಟ್ರ್ಯಾಕ್ ಆಗುತ್ತದೆ. ಆದರೆ ಆ ಸ್ಥಳದಲ್ಲಿ ಎಮ್ಮೆ, ಹಸುಗಳ ತಳಿಗಳನ್ನು ಸಾಕುವುದಕ್ಕೆ ಬರುವುದಿಲ್ಲ. ಅಲ್ಲಿ ಬೆಳೆಯತಕ್ಕ ಹುಲ್ಲು ಕುದುರೆಗಳಿಗೆ ಮಾತ್ರ.....

ಹೆಚ್.ಟಿ. ಕೃಷ್ಣಪ್ಪ.—ಸ್ವಾಮಿ, ನಾನು ಹೇಳುತ್ತಿರುವುದು...

ಅಧ್ಯಕ್ಷರು.—ಅಲ್ಲಿ ಬೆಳೆಯತಕ್ಕ ಹುಲ್ಲು ಕುದುರೆಗಳು ತಿನ್ನುವುದಕ್ಕೆ ಅನುಕೂಲವಾಗಿದೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಸ್ವಾಮಿ, ಫಲವತ್ತಾದ ಭೂಮಿಗೆ ನೀವು ಯಾವ ಹುಲ್ಲನ್ನು ಹಾಕಿದರೂ ಚೆನ್ನಾಗಿ ಬೆಳೆಯುತ್ತದೆ. ನಾನು ಹೇಳುತ್ತಿರುವುದು ಆ ಸ್ಪಡ್ ಫಾರಂನವರಿಗೆ ಎಷ್ಟು ಜಾಗ ಬೇಕೋ ಅಷ್ಟನ್ನು ಕೊಟ್ಟು ಉಳಿದ ಭೂಮಿಯನ್ನು ಸರ್ಕಾರಕ್ಕೆ ಉಳಿಸಿಕೊಳ್ಳಬಹುದಲ್ಲವೆ ?

ಶ್ರೀ ಎಂ. ವೀರಪ್ಪಮೊಯ್ಲಿ,—ನನಗೆ ತಿಳಿದಿರುವಂತೆ and even the hon. Members are aware that the Kunigal Stud Farm is the oldest in our Country. ಅದು ಕುದುರೆ ತಳಿ ಅಭಿವೃದ್ಧಿಗೆ ಬಹಳ ಅನುಕೂಲವಾಗಿದೆ. ಅದನ್ನು ಅವರು ಉಪಯೋಗ ಮಾಡಿಕೊಳ್ಳಲಿ ಈ ಕುಣಿಗಲ್ ಸ್ಟಡ್ ಫಾರಂ ನಮ್ಮ ಇಡೀ ದೇಶದಲ್ಲೇ ಬಹಳ ಹಳೆಯದು, ಪುರಾತನವಾದುದು ಮತ್ತು ಹೆಸರುವಾಸಿಯಾದಂಥಾದ್ದು. ಅಂಥ ಜಾಗವನ್ನು ತೆಗೆದು ಬೇರೆ ಕಡೆ ಕೊಡುವುದು ಸರಿಯಲ್ಲ. ಹಸು ಎಮ್ಮೆ ತಳಿಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ ಬೇರೆ ಜಾಗವನ್ನು ಬೇಕಾದರೆ ಕೊಡೋಣ. I think, the Kunigal Stud Farm is a very unique one, It will not be proper to disturb them

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಈ ಸ್ಪಡ್ ಫಾರಂನ್ನೇ ತೆಗೆದುಹಾಕಿ ಎಂದು ನಾನು ಹೇಳುತ್ತಿಲ್ಲ. ಆದರೆ ಈ ಜಾಗ ಬಹಳ ಪವಿತ್ರವಾದುದು, ಆದ್ದರಿಂದ ಆ ಜಾಗವನ್ನು ತೆಗೆಯಬಾರದೆಂದು ಸರ್ಕಾರದ ಧೋರಣೆ ಏನಾದರೂ ಇದ್ದರೆ ಅದಕ್ಕೆ ನಾವು ವಿಷಾದಪಡಬೇಕಾಗುತ್ತದೆ. ನಾನು ಹೇಳುತ್ತಿರುವುದು

ಅವರಿಗೆ ಎಷ್ಟು ಜಾಗ ಬೇಕೋ ಅಷ್ಟನ್ನು ಕೊಟ್ಟು ಉಳಿದ ಜಾಗವನ್ನು ಸರ್ಕಾರದವರೇ ಇಟ್ಟುಕೊಳ್ಳಿ ಎಂದು.

ಅಧ್ಯಕ್ಷರು.—ಆ ಜಾಗ ಪವಿತ್ರವಾದುದು ಎಂದು ಮಾನ್ಯ ಸಚಿವರು ಹೇಳಲಿಲ್ಲ. ಅವರು ಹೇಳಿದ್ದು, ಆ ಜಾಗ ಬಹಳ ಪುರಾತನವಾದುದು ಎಂದು

ಶ್ರೀ ಎಂ. ವೀರಪ್ಪಮೊಯ್ಲಿ.—ನಾನ ಪವಿತ್ರವಾದ ಜಾಗ ಎಂದು ಹೇಳಲಿಲ್ಲ. It is the oldest stud farm in the country. The suggestion made by the hon. Member Sri H.T. Krishnappa we will bear it in mind.

ಶ್ರೀ ಬಿ.ಎ. ಮೊಹಿದ್ದೀನ್.—ಸ್ವಾಮಿ, ಈ ಸ್ಟಡ್ ಫಾರಂನ್ನು ೧ ಲಕ್ಷ ರೂಪಾಯಿಗೆ ಗುತ್ತಿಗೆ ಕೊಟ್ಟಿರುವುದಾಗಿ ಹೇಳಿದ್ದೀರಿ. ಇದನ್ನು ಯಾವ ಆಧಾರದ ಮೇಲೆನಿಗದಿ ಮಾಡಿದ್ದೀರಿ ? ೧೯೭೬ರ ನಂತರ ಪುನಃ ಗುತ್ತಿಗೆಯನ್ನು ಯಾವ ಆಧಾರದ ಮೇಲೆ ಹೆಚ್ಚಿಗೆ ಮಾಡಿದಿರಿ.

ಶ್ರೀ ಎಂ. ವೀರಪ್ಪಮೊಯ್ಲಿ.—ಈಗ ಹೆಚ್ಚು ಮಾಡುವುದಕ್ಕೆ ನಮಗೆ ಅವಕಾಶವಿದೆ. ಆದರೂ ಮಾನ್ಯ ಸದಸ್ಯರು ಏನು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೀರಿ ಅದನ್ನು ವಿಚಾರ ಮಾಡಿ ನೋಡುತ್ತೇನೆ, ಸರ್ಕಾರಕ್ಕೆ ಹೆಚ್ಚು ಆದಾಯ ಬರುವುದಾದರೆ ಅದನ್ನು ನಮ್ಮ ವಶಕ್ಕೆ ತೆಗೆದುಕೊಳ್ಳುವುದು ನಮ್ಮ ಕರ್ತವ್ಯ. ಇದರ ಬಗ್ಗೆ ಗಮನಹರಿಸಿ ಗುತ್ತಿಗೆ ಹಣವನ್ನು ಇನ್ನೂ ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು ಯಾವ ಆಧಾರದ ಮೇಲೆ ಈ ಗುತ್ತಿಗೆ ಹಣವನ್ನು ನಿಗದಿ ಮಾಡಿದ್ದೀರಿ ಎಂದರೆ The hon. Member is aware that the rate is not fixed on the basis of the market value of the land. We have to talk with the BTC authorities and fix up the rate. We will do it.

ಶ್ರೀ ಆಂದಾನಯ್ಯ.—ಸ್ವಾಮಿ, ಈ ಕುಣಿಗಲ್ ಸ್ಟಡ್ ಫಾರಂನಲ್ಲಿ ಬೆಳೆದು ತಯಾರಾದಂಥ ಕುದುರೆಗಳು ನಮ್ಮ ದೇಶಾದ್ಯಂತ ಬಹಳ ಹೆಸರು ಪಡೆದಿವೆ ಮತ್ತು ಹೆಚ್ಚು ಹೆಚ್ಚು ಸಂಪಾದನೆಯನ್ನೂ ಕೂಡ ಈ ಫಾರಂನವರು ಗಳಿಸುತ್ತಿದ್ದಾರೆ. ಈ ದೃಷ್ಟಿಯಿಂದ ನೋಡುವುದಾದರೆ ಇವತ್ತು ನಾವು ಏನು ಗುತ್ತಿಗೆ ಹಣವನ್ನು ನಿಗದಿ ಮಾಡಿದ್ದೇವೆ ಇದು ಬಹಳ ಕಡಿಮೆ ಎನಿಸುತ್ತದೆ. ಆದ್ದರಿಂದ ಇದನ್ನು ೫ ಲಕ್ಷ ರೂಪಾಯಿಗೆ ಹೆಚ್ಚಿಸುವ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವೀರಪ್ಪಮೊಯ್ಲಿ.—ಸ್ವಾಮಿ, ನಮ್ಮ ರಾಜ್ಯದಲ್ಲಿ ರೇಸ್ ಕೋರ್ಸ್‌ನಿಂದ ಬಹಳ ಆದಾಯ ಸರ್ಕಾರಕ್ಕೆ ಬರುತ್ತಿದೆ. ಬೆಟ್ಟಿಂಗ್ ಟ್ಯಾಕ್ಸ್‌ನ್ನು ನಮ್ಮ ರಾಜ್ಯದಲ್ಲಿ ಹಾಕಿರುವಷ್ಟು ಬೇರೆ ಯಾವ ರಾಜ್ಯದವರೂ ಹಾಕಿಲ್ಲ. For the kind information of the hon. Member, very recently we have enhanced the betting tax. We will into it. ಗುತ್ತಿಗೆ ಹಣವನ್ನು ಜಾಸ್ತಿ ಮಾಡಬೇಕೆಂದು ಮಾನ್ಯ ಸದಸ್ಯರು ಏನು ಹೇಳುತ್ತಿದ್ದೀರಿ ಇದನ್ನು ನಾವು ಪರಿಶೀಲನೆ ಮಾಡುತ್ತೇವೆ,

Land acquisition for Construction of KSRTC Bus Depot in Kunigal Town.

541 SRI ANDANAIAH (Kunigal)—Will the Minister for Transport and Minor Irrigation be pleased to state.—

(a) whether the Karnataka State Road Transport Corporation has acquired lands for opening a Bus Depot at Kunigal in Tumkur District.

(b) if so, when it was acquired;

(c) the annual income that would be derived from the Coconut trees existing at the acquired land, by the Corporation.